


## ಸುದ್ದಿ ಸಂಚಯ




# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಪರಿಹಾರ ಕಾರ್ಯಗಳು (ಆಗಸ್ಟ್ ೨೦೨೫)

**೧. ನೆರೆ ಪರಿಹಾರ: 1) ಹಿಮಾಚಲ ಪ್ರದೇಶ :** ಮಂಡಿ ಜಿಲ್ಲೆಯಲ್ಲಿ **ಶಿಮ್ಲಾ** ಕೇಂದ್ರವು ವಿವಿಧ ಪರಿಹಾರ ಕಾರ್ಯಗಳನ್ನು ಮುಂದುವರಿಸಿದೆ. ಆಗಸ್ಟ್ 15 ರಿಂದ 27ರ ವರೆಗೆ 150 ಹಾನಿಗೊಳಗಾದ ಕುಟುಂಬಗಳಿಗೆ ಹಲವು ಅಗತ್ಯ ಸಾಮಗ್ರಿಗಳನ್ನು ಕೇಂದ್ರವು ವಿತರಿಸಿದೆ.

**2) ಉತ್ತರಾಖಂಡ :** ಇತ್ತೀಚೆಗೆ ಉಂಟಾದ ಮೇಘಸ್ಫೋಟ ಹಾಗೂ ಜಡಿಮಳೆಯ ಕಾರಣದಿಂದಾಗಿ ಉತ್ತರಕಾಶಿ ಜಿಲ್ಲೆಯ ಹಲವು ಪ್ರದೇಶಗಳಲ್ಲಿ ಜಲಪ್ರವಾಹವುಂಟಾಗಿದ್ದು, ಅಪಾರ ಜೀವಹಾನಿ ಹಾಗೂ ಆಸ್ತಿಪಾಸ್ತಿಗಳಿಗೆ ಹಾನಿಯುಂಟಾಗಿದೆ. ಈ ಪ್ರದೇಶಗಳಲ್ಲಿ **ಡೆಹ್ರಡೂನ್** ಕೇಂದ್ರವು ಭಟ್ವಾರಿ ಹಾಗೂ ಹರ್ಸಿಲ್ ಗ್ರಾಮಗಳಲ್ಲಿ 3 ವೈದ್ಯಕೀಯ ಶಿಬಿರಗಳನ್ನು ಏರ್ಪಡಿಸಿದೆ. ಇದಲ್ಲದೆ ಇತರ ಅನೇಕ ಅಗತ್ಯ ಸಾಮಗ್ರಿಗಳನ್ನೂ ಕೇಂದ್ರವು ವಿತರಿಸಿದೆ.

**3) ಪಶ್ಚಿಮ ಬಂಗಾಳ :** ಧಾರಾಕಾರ ಮಳೆಯಿಂದಾಗಿ ಆಗಸ್ಟ್ ತಿಂಗಳಲ್ಲಿ ಪಶ್ಚಿಮ ಬಂಗಾಳದ ಹಲವು ಪ್ರದೇಶಗಳಲ್ಲಿ ಪ್ರವಾಹವುಂಟಾಗಿದ್ದು, ತೊಂದರೆಗೊಳಗಾದ ಕುಟುಂಬಗಳಿಗೆ ವಿವಿಧ ಶಾಖಾಕೇಂದ್ರಗಳು ಆಹಾರ ಹಾಗೂ ಇತರ ಸಾಮಾಗ್ರಿಗಳನ್ನು ವಿತರಿಸಿವೆ:




i) **ಬ್ರಜೇಪ್ರತಾಪಪುರ** (ವರ್ಧಮಾನ) ಕೇಂದ್ರವು ಆಗಸ್ಟ್ 12ರಂದು ಪಶ್ಚಿಮ ಮೇದಿನೀಪುರ ಜಿಲ್ಲೆಯಲ್ಲಿ 244 ಕುಟುಂಬಗಳಿಗೆ ಹಲವು ಆಹಾರ ಪದಾರ್ಥಗಳನ್ನು ವಿತರಿಸಿದೆ.

ii) **ನೌರಾ** ಕೇಂದ್ರವು ಆಗಸ್ಟ್ 16ರಂದು 100 ಕುಟುಂಬಗಳಿಗೆ ಆಹಾರ ಹಾಗೂ ಇತರ ಮೂಲಭೂತ ಪದಾರ್ಥಗಳನ್ನು ವಿತರಿಸಿದೆ.

**೨. ಬೇಸಿಗೆ ಪರಿಹಾರ: 1) ತಮಿಳುನಾಡು: ಕೋಣಂಪಟ್ಟಿ** ಕೇಂದ್ರವು ಆಗಸ್ಟ್ ತಿಂಗಳಲ್ಲಿ 1550 ಗ್ಲಾಸ್ ಮಜ್ಜಿಗೆಯನ್ನು ವಿತರಿಸಿದೆ.

**೩. ಸಂತ್ರಸ್ತ ಪರಿಹಾರ :** ಈ ಕೆಳಗಿನ ಕೇಂದ್ರಗಳು ಅಗತ್ಯವಿದ್ದವರಿಗೆ ವಿವಿಧ ಸಾಮಗ್ರಿಗಳನ್ನು ವಿತರಿಸಿವೆ: **ಭಾರತದಲ್ಲಿ : ಕೊಯಂಬತ್ತೂರು ಮಿಷನ್, ಕಲ್ಯಾಣಿ, ಕೊಲ್ಹಾಪುರ, ಕೊಯಿಲಾಂಡಿ, ಲಿಂಬ್ಡಿ, ಮದುರೈ, ಮಾಲ್ಡಾ, ನಟ್ಟರಾಂಪಳ್ಳಿ, ಪೋರ್ ಬಂದರ್, ಸೋಮ್‌ಸರ್, ತಿರುಮಕ್ಕೂಡಲ್, ವಡೋದರ, ವಾರಣಾಸಿ ಸೇವಾಶ್ರಮ.**

**ವಿದೇಶಗಳಲ್ಲಿ : ಬಾಂಗ್ಲಾದೇಶ : ಬಾಗೇರ್‌ಹಾಟ್** ಕೇಂದ್ರವು ಆಗಸ್ಟ್ 18ರಂದು ಬಟ್ಟೆಬರೆಗಳನ್ನು ವಿತರಿಸಿದೆ. **ದಕ್ಷಿಣ ಆಫ್ರಿಕಾ: ಡರ್ಬನ್, ಫೀನಿಕ್ಸ್** ಕೇಂದ್ರಗಳು ಆಗಸ್ಟ್ ತಿಂಗಳಲ್ಲಿ ವಿವಿಧ ಪ್ರದೇಶಗಳಲ್ಲಿ ಆಹಾರ ಪದಾರ್ಥ, ಸೋಪ್ ಇತ್ಯಾದಿ ಪದಾರ್ಥಗಳನ್ನು ವಿತರಿಸಿವೆ.

**೪. ಕ್ಷಯರೋಗ ಪರಿಹಾರ ಕಾರ್ಯ : ಪಶ್ಚಿಮ ಬಂಗಾಳ : ಸಿಕ್ರಾ ಕುಲೀನಗ್ರಾಮ** ಕೇಂದ್ರವು ಆಗಸ್ಟ್ 19ರಂದು 13 ಮಂದಿ ಸ್ಥಳೀಯ ಕ್ಷಯರೋಗಿಗಳಿಗೆ ಶಕ್ತಿವರ್ಧಕ ಕಿಟ್‌ಗಳನ್ನು ವಿತರಿಸಿದೆ.

**೫.ನೆರೆ ಪುನರ್ವಸತಿ: 1) ಹಿಮಾಚಲ ಪ್ರದೇಶ :** ಮಂಡಿ ಜಿಲ್ಲೆಯಲ್ಲಿ **ಶಿಮ್ಲಾ** ಕೇಂದ್ರವು ವಿವಿಧ ಪುನರ್ವಸತಿಯ ಕಾರ್ಯಗಳನ್ನು ಆಗಸ್ಟ್ 15ರಂದಿ 27ರ ವರೆಗೆ ನಡೆಸಿದೆ.

**೬. ಸಂತ್ರಸ್ತ ಪುನರ್ವಸತಿ: ಪಶ್ಚಿಮ ಬಂಗಾಳ : ಬೇಲೂರು ಮಠ ಪ್ರಧಾನ ಕೇಂದ್ರವು ಗೌರ್‌ಹಾಟಿ** ಕೇಂದ್ರದ ಮೂಲಕ ಆಗಸ್ಟ್ 3ರಂದು ಹೂಗ್ಲಿ ಜಿಲ್ಲೆಯ ಬಡಜನರಿಗೆ 3 ಮನೆಗಳನ್ನು ಕಟ್ಟಿಸಿಕೊಟ್ಟಿದೆ.

**೭. ಅಗತ್ಯ ಸಾಮಗ್ರಿಗಳ ನೆರವು: ಫಿಜಿ: ಫಿಜಿ** ಕೇಂದ್ರವು ಮೇ, ಆಗಸ್ಟ್ ತಿಂಗಳ ಅವಧಿಯಲ್ಲಿನಾದಿ, ಫಿಜಿ ಪ್ರದೇಶಗಳಲ್ಲಿನ ಆಸ್ಪತ್ರೆಗೆ 1000 ಕನ್ನಡಕ ಹಾಗೂ ಒಂದು ಮಕ್ಕಳ ತ್ರಾಸನ್ನು ವಿತರಿಸಿದೆ.




Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020